ಕಟ್ಟುನಿಟ್ಟಾಗಿ ಈ ನಿಯಮಗಳನ್ನು ಅನುಷ್ಠಾನ ಮಾಡಲು ಮತ್ತು ಬೇರೆ ಬೇರೆಯಾದ ರೀತಿಯಲ್ಲಿ ಅಧಿಕಾರಿಗಳು ಈ ಕಾನೂನುಗಳನ್ನು ದುರುಪಯೋಗ ಮಾಡತಕ್ಕ ಪರಿಸ್ಥಿತಿಯನ್ನು ತಪ್ಪಿಸಲು ನಾವು ಸರಿಯಾದ ಚಕ್ರವ್ಯೂಹ ರಚಿಸಿ ಅದನ್ನು ಹತೋಟಿಗೆ ತರಲು ಪ್ರಾರಂಭ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮ್ಮ ಗೌರವಾನ್ವಿತ ಸದನದ ಸದಸ್ಯರೊಬ್ಬರು ಎಲ್ಲಿ ಯಾರು ತೆಗೆದುಕೊಂಡಿದ್ದಾರೆ ಎಂಬುದನ್ನು ಹೇಳಿ ಎಂದು ಕೇಳಿದ್ದಾರೆ. ಅವರನ್ನು ನನ್ನ ಜೊತೆಯಲ್ಲಿ ಕಳುಹಿಸಿಕೊಡಿ. ಬಾರ್ ಲೈಸೆನ್ಸ್ಗಳಿಗೆ ಸಿ.ಎಲ್.-2 ಲೈಸೆನ್ಸಗಳಿಗೆ ಇನ್ಸ್ಪೆಕ್ಟರ್ಗಳಿಗೆ ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ಅವರಿಗೆ ತೋರಿಸುತ್ತೇನೆ. ಅವರು ನನ್ನ ಜೊತೆಯಲ್ಲಿ ಬರಲಿ.

ಶ್ರೀ ಕೆ. ಶಿವಮೂರ್ತಿ : ಬ್ಲೈಂಡ್ ಆಗಿ ಹೇಳಿದರೆ ಹೇಗೆ, ಅವರು ಯಾರು ಎಂಬುದನ್ನು ಹೇಳಬೇಕು. ನಾನು ಅವರಿಗೆ ಸಹಾಯ ಮಾಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) : ಭ್ರಷ್ಟಾಚಾರ ಇಲ್ಲವೆಂದು ನಾನು ಹೇಳುವುದಿಲ್ಲ. ಅದು ಕೇವಲ ಕಾನೂನಿನಿಂದ ಹೋಗಲು ಸಾಧ್ಯವಿಲ್ಲ. ನಾವು ನೀವು ನಾನ್ ಅಫಿಷಿಯಲ್ಲಾಗಿ ಕುಳಿತುಕೊಂಡು ವಿಚಾರ ಮಾಡಬೇಕು. We will call for a meeting, let us sit together and sort out a programme.

ಕೊರಟಗೆರೆ ತಾಲ್ಲೂಕು ಕೋಳಾಲ ಗ್ರಾಮದಲ್ಲಿ ಉಪ-ಆರಕ್ಷಕ ಠಾಣೆಯನ್ನು ತೆರೆಯುವುದರ ಬಗ್ಗೆ.

309 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಟಗೆರೆ ತಾಲ್ಲೂಕು ಕೋಳಾಲ ಗ್ರಾಮವು ಕೊರಟಗೆರೆಯಿಂದ ಸುಮಾರು 20ಕಿ.ಮೀ. ದೂರದಲ್ಲಿದ್ದು ಅಲ್ಲಿ ಪೊಲೀಸ್ ಸಬ್ ಸ್ಟೇಷನ್ ಇಲ್ಲದಿರುವುದರಿಂದ ಆ ಭಾಗದ ಗ್ರಾಮಾಂತರ ಜನರಿಗೆ ನೆಮ್ಮದಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಆ ಗ್ರಾಮದಲ್ಲಿ ಪೊಲೀಸ್ ಸಬ್ ಸ್ಟೇಷನ್ ತೆರೆಯಲು ಏನು ಕ್ರಮ ತೆಗೆದುಕೊಂಡಿದೆ?

ಇ) ಹಾಗಿದ್ದಲ್ಲಿ, ಮೇಲ್ಕಂಡ ಪೋಲೀಸ್ ಸ್ಟೇಷನ್ ತೆರೆಯಲು ಎಷ್ಟು ಕಾಲಾವಕಾಶ ಬೇಕು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಕೊರಟಗೆರೆ ತಾಲ್ಲೂಕು ಕೋಳಾಲ ಗ್ರಾಮದಲ್ಲಿ ಸದ್ಯಕ್ಕೆ ಪೋಲೀಸ್ ಹೊರಠಾಣೆ ಅಸ್ತಿತ್ವದಲ್ಲಿಲ್ಲ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 1994-95ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಶ್ರೀ ಸಿ. ವೀರಭದ್ರಯ್ಯ : ಮಾನ್ಯ ಅಧ್ಯಕ್ಷರೆ, ಕಳೆದ 4 ವರ್ಷಗಳಿಂದ ನಾನು ಕೊರಟಗೆರೆ ತಾಲ್ಲೂಕು ಕೋಳಾಲ ಗ್ರಾಮದಲ್ಲಿ ಒಂದು ಪೊಲೀಸ್ ಠಾಣೆಯನ್ನು ತೆರೆಯಬೇಕೆಂದು ಈ ಸದನದಲ್ಲಿ ಕೇಳುತ್ತಾ ಇದ್ದೇನೆ. ಈ ವರ್ಷಗಳಿಂದ ಕೂಡ ಸರ್ಕಾರದವರು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿಕೊಂಡು ಬಂದಿದ್ದಾರೆ. ಈ ಕೋಳಾಲ ಗ್ರಾಮದಲ್ಲಿ ವಿಪರೀತ ಕಳ್ಳತನಗಳು, ಮಾನಭಂಗ ಪ್ರಕರಣಗಳು ನಡೆಯುತ್ತಿವೆ. ದಿನ ಬೆಳಗಾದರೆ ಗಲಾಟೆಯಾಗುತ್ತಿರುತ್ತದೆ, ಹತ್ತಿರದ ಪೊಲೀಸ್ ಠಾಣೆ ಸುಮಾರು

20-30 ಕಿಲೋಮೀಟರ್ ದೂರದಲ್ಲಿದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ವರ್ಷದಲ್ಲಿಯೇ ಕೋಳಾಲ ಗ್ರಾಮದಲ್ಲಿ ಪೊಲೀಸ್ ಠಾಣೆಯನ್ನು ತೆರೆಯುತ್ತೇವೆಂಬ ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕೋಳಾಲ ಗ್ರಾಮದಲ್ಲಿ 1994-95ರಲ್ಲಿ ಒಂಟು ಔಟ್‌ಪೋಸ್ಟನ್ನು ತೆರೆಯಲಾಗುವುದು.

ಮತೀಯ ಗಲಭೆಯಲ್ಲಿ ಮೃತರಾದ ಕುಟುಂಬದ ಅವಲಂಬಿತರಿಗೆ ಉದ್ಯೋಗ

249 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮತೀಯ ಗಲಭೆಯಲ್ಲಿ ಮೃತರಾದ ಕುಟುಂಬದ ಅವಲಂಬಿತರಿಗೆ ಉದ್ಯೋಗ ನೀಡಿಕೆಗೆ ಸರ್ಕಾರವು ಬದ್ಧವಾಗಿದೆಯೇ?

ಆ) ಹಾಗಿದ್ದಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ 4 ವರ್ಷಗಳಿಂದ ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಇ) ಈ ಸಂಬಂಧ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಬಾಕಿ ಇರುವ ಪ್ರಕರಣಗಳೆಷ್ಟು? (ವಿವರಗಳನ್ನು ಒದಗಿಸುವುದು)

ಈ) ಮೃತರಾದವರ ಕುಟುಂಬದವರಿಗೆ ಉದ್ಯೋಗ ನೀಡಿಕೆಗೆ ತಡವಾಗಲು ಕಾರಣವೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ಹೌದು.

ಆ) ಇಲ್ಲ.

ಇ) ಚನ್ನಪಟ್ಟಣ ತಾಲ್ಲೂಕಿನಲ್ಲಿ 8 ಪ್ರಕರಣಗಳು ಬಾಕಿ ಇವೆ. (ವಿವರಗಳು ಅನುಬಂಧದಲ್ಲಿವೆ)

ಈ) ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1993ನ್ನು ತಿದ್ದುಪಡಿ ಮಾಡಬೇಕಾಗಿದ್ದ ಕಾರಣ ತಡವಾಗಿದೆ. ದಿನಾಂಕ 2-1-94ರಂದು ತಿದ್ದುಪಡಿ ಪ್ರಕಟಣೆ ಹೊರಡಿಸಲಾಗಿದ್ದು ಶೀಘ್ರದಲ್ಲಿ ಈ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗುತ್ತದೆ.

ಅನುಬಂಧ

ಅರ್ಜಿಗಳ ವಿವರಗಳು ಈ ಕೆಳಕಂಡಂತಿವೆ

ಸಂಖ್ಯೆ : ಹೆಚ್‌ಡಿ : 31 ಸಿಆರ್‌ಆರ್ 94

ಕ್ರ.ಸಂ	ಹೆಸರು ಮತ್ತು ವಿಳಾಸ	ಮತೀಯ ಗಲಭೆಯಲ್ಲಿ ಮೃತಪಟ್ಟವರ ಹೆಸರು	ಮೃತಪಟ್ಟ ದಿನಾಂಕ	ಅರ್ಜಿಸಲ್ಲಿಸಿದ ದಿನಾಂಕ
1.	ಶ್ರೀಮತಿ :ಶ್ರೀ ಗಿರಿಜಮ್ಮ ಕೋಂ ಸಿಂಗರೇಗೌಡ ಚನ್ನಪಟ್ಟಣ	ಸಿಂಗರೇಗೌಡ	03-10-90	21-06-1993
2.	ಅಜೀಜ್ ಅಹ್ಮದ್ ಖಾನ್ ಬಿನ್ ಲೇಟ್ ಸನಾವುಲ್ಲಾಖಾನ್ ಚನ್ನಪಟ್ಟಣ	ಸನಾವುಲ್ಲಾಖಾನ್	03-10-90	08-07-1993